ಹಾರುವ ತಟ್ಟೆಗಳು ಇವೆಯೋ ಇಲ್ಲವೋ ಎನ್ನುವ ಕುತೂಹಲಕ್ಕೆ ಇನ್ನೂ ಸ್ಪಷ್ಟ ಉತ್ತರ ಸಿಕ್ಕಿಲ್ಲ. 'ಹಾರುವ ಕಣ್ಣು'ಗಳಂತೂ ನಮ್ಮೆದುರೇ ಇವೆ – 'ಡ್ರೋನ್'ಗಳ ರೂಪದಲ್ಲಿ. ಮಕ್ಕಳು ಬಾನಂಗಳಕ್ಕೆ ಹಾರಿಬಿಟ್ಟ ಗಾಳಿಪಟಗಳಷ್ಟೇ ಸಹಜವಾಗಿ ಡ್ರೋನ್‌ಗಳು ಕಾಣಸಿಗುತ್ತಿವೆ. ಹಾಗೆಂದು, ಇದು ಮಕ್ಕಳಾಟವೇನಲ್ಲ. ಮದುವೆ ಮನೆ, ಕೃಷಿ ಬಯಲು, ಗೂಢಚಾರಿಕೆಯಿಂದ ಹಿಡಿದು ಯುದ್ಧಭೂಮಿಯವರೆಗೆ ಡ್ರೋನ್‌ಗಳ ವಿಸ್ತಾರವಿದೆ. ಪ್ರಸ್ತುತ ಎಲ್ಲರ ಕೈಗಳಲ್ಲಿ ಮೊಬೈಲ್ ಫೋನ್‌ಗಳಿರುವಂತೆ, ಜನಸಾಮಾನ್ಯರು ಕೂಡ ಡ್ರೋನ್‌ಗಳನ್ನು ಬಳಸುವ ದಿನ ದೂರವಿಲ್ಲ. ಬನ್ನಿ, 'ಡ್ರೋನ್ ವಿಶ್ವ'ದೊಳಗೊಳಗೊಮ್ಮೆ ಇಣುಕಿ ಬರೋಣ.

**■ ಗುರುರಾಜ್ ಎಸ್. ದಾವಣಗೆರೆ**

